# ಆಕಾಶಕೆ ಏಣಿಯಿಟ್ಟ



ಆಕಾಶಕೆ ಏಣಿಯಿಟ್ಟ
ಸರಸರಸರ ಹತ್ತಿದ
ಮುಗಿಲಿನೆಳೆಗೆ ಜೋತುಬಿದ್ದು
ಗಿರಿಗಿಟ್ಟಲೆ ಸುತ್ತಿದ

ಅವನೇರಿದ ಎತ್ತರಕ್ಕೆ
ಯಾವ ಗಿರಿಯ ನೆತ್ತಿಯೂ
ಏರಲಿಲ್ಲ, ಯಾವುದೊಂದು
ರೆಕ್ಕೆ ಬಡಿವ ಹಕ್ಕಿಯೂ

ರವಿಯ ನೋಡಲಾಗಲಿಲ್ಲ;
ಕಾಣಿಸಿದವ ಚಂದಿರ
ಅವನೊ ಕವಿತೆಯಲ್ಲಿಯಂತೆ
ಕಾಣಲಿಲ್ಲ ಸುಂದರ

ಮುಗಿಲ ಹಣ್ಣ ಹಿಡಿಯುವಂತೆ
ಕೈಗಳ ಮೇಲೆತ್ತಲು
ಆನೆಯಂಥ ಪ್ರಾಣಿಯೊಂದು
ಮುಂಚಾಚಿತು ಸೊಂಡಿಲು

ಅದಕೆ ತನ್ನ ಹೆಗಲು ಕೊಟ್ಟು
ಭೂಮಿಗೆ ಹಿಂತಿರುಗಿದ
ಮನೆಯೊಳಕ್ಕೆ ನುಸುಳಿದವನೆ
ತಕ್ಷಣ ಕೆಳಗಿಳಿಸಿದ

ಸೊಂಡಿಲಲ್ಲ, ಥಂಡಿ ಮೋಡ
ಕರಗಿ ಭೋರ್ಗರೆಯಿತು
ಅವನನ್ನೂ ಮನೆಸಮೇತ
ಕೊಚ್ಚಿಕೊಂಡು ಹೋಯಿತು

ಕಪ್ಪಿಟ್ಟಿದೆ ಗಗನವೀಗ
ಮೋಡವೊಂದೂ ಸಿಕ್ಕದೆ
ನಟ್ಟಿರುಳಿನ ಮುಗಿಲ ಚಿಕ್ಕಿ
ಪಕಪಕಪಕ ನಕ್ಕಿದೆ